## ಸತ್ತವಳು ಎದ್ದು ಬಂದಾಗ

ಧಾರಾವಾಹಿಗಳು ಎಷ್ಟು ಅಧೋಗತಿಗೆ ಇಳಿದಿವೆ ಎಂದರೆ 'ನನ್ನರಸಿ ರಾಧೆ' ಒಂದು ಉದಾಹರಣೆ. ಇಲ್ಲಿ ನಾಯಕನ ತಂಗಿ ಮತ್ತು ನಾಯಕನನ್ನು ಕೊಲೆ ಮಾಡಿಸುವ ತಂತ್ರಗಳು ವಿಫಲವಾದವು. ಛಲ ಬಿಡದ ಆ ಹೆಣ್ಣು ಕೊನೆಗೂ ನಾಯಕಿಯನ್ನು ಹೈಟೆಕ್ ಆಸ್ಪತ್ರೆಯಲ್ಲಿ ಮುಗಿಸೆಯೇ ಬಿಟ್ಟಳು. ಮನೆಯ ಎಲ್ಲ ಸದಸ್ಯರು ಅದರಲ್ಲೂ ಮುಖ್ಯವಾಗಿ ನಮ್ಮ ವೀಕ್ಷಕರು ಅಯ್ಯೋ ಪಾಪ ಇಂಚರಾಳ ಕಥೆ ಮುಗಿಯಿತು ಅಂದುಕೊಳ್ಳುವ ಹೊತ್ತಿಗೇ ಚಿತೆಯ ಮೇಲೆ ಶವವಾಗಿ ಮಲಗಿದ್ದ 'ನನ್ನರಸಿ ರಾಧೆ' ಮತ್ತೆ ಪುಟಿದೆದ್ದು ಬರಬೇಕೇ? ತರ್ಕಕ್ಕೇ ಸಿಗದ ಇಂಥ ಕುಟಿಲ ತಂತ್ರಗಳ ರೂವಾರಿ ಆ ಹೆಣ್ಣು ಯಾರಪ್ಪ ಅಂದ್ರೇ ನಾಯಕನ ಸ್ವಂತ ಅಕ್ಕ. ಇಂಥ ಪವಾಡ ಸೃಷ್ಟಿ ಕ್ರಿಯೆಗೆ ಏನು ಹೇಳೋಣ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಮೂರ್ಖರ ಸಂತೆ

ಕಲರ್ಸ್ ಕನ್ನಡದ ಕೆಲವು ಧಾರಾವಾಹಿಗಳು ನಮ್ಮ ತಾಳ್ಮೆಯನ್ನು ಪರೀಕ್ಷಿಸುತ್ತಿವೆ. ಕತೆ ಮುಂದುವರಿಸಲಾಗದೆ, ಮುಗಿಸಲೂ ಇಷ್ಟವಾಗದೆ ಒದ್ದಾಡುತ್ತಿದ್ದಾರೆ. 'ಮಂಗಳಗೌರಿ'ಯ ಪಾತ್ರಧಾರಿಗಳು ಬದಲಾಗುತ್ತಿದ್ದಾರೆ. 'ಮಂಗಳಗೌರಿ' ಒಬ್ಬಳೇ ಐದಾರು ರೌಡಿಗಳ ಜೊತೆ ಹೊಡೆದಾಡುವ ದೃಶ್ಯವಂತೂ ಅಸಹಜ. ಗೀತಾಳಿಗೆ ಮುತ್ತು ಕೊಡಲು, ಹಗ್ಗ ಕಟ್ಟಿಸಿಕೊಂಡು ಮಾಡಿನಿಂದ ಇಳಿದು ಬರುವುದು ಬಾಲಿಶ.

ಕುತೂಹಲದಿಂದ ಕೂಡಿದ್ದ 'ನನ್ನರಸಿ ರಾಧೆ' ಈಗ ಹಳಿ ತಪ್ಪುತ್ತಿದೆ. ಹೊಸ ನಮೂನೆಯ ವಿಷ ಪರಿಚಯಿಸಿದ್ದಕ್ಕೆ ಒಂದು ಶಹಭಾಷ್! ಇಂಚರಾಳ ಕೈ ಹಿಡಿದುಕೊಂಡಿರುವ ಅವಳ ಅಮ್ಮನಿಗೂ ಅವಳ ದೇಹ. ಇನ್ನೂ ಬಿಸಿಯಾಗಿರುವ ಬಗ್ಗೆ ಅರಿವಿಲ್ಲದಿರುವುದು ಒಂದು ಸೋಜಿಗವೇ ಸರಿ. ಅವಳ ಎದೆಯ ಮೇಲೆ ತಲೆ ಇಟ್ಟು ದುಃಖಿಸುತ್ತಿರುವ ಅಗಸ್ತ್ಯ ಅವಳ ಹೃದಯ ಬಡಿತ ಕೇಳದಿರುವಷ್ಟು ಮುಗ್ಧನೇ? ಒಟ್ಟಿನಲ್ಲಿ ನಮ್ಮನ್ನು ಮೂರ್ಖರನ್ನಾಗಿಸುವ ಹುನ್ನಾರ ಇದರ ಹಿಂದಿದೆ.

—ಪುಷ್ಪಾ ಎನ್.ಕೆ. ರಾವ್ ಉಡುಪಿ

## ಒಳ್ಳೆಯ ನಟನೂ ಹೌದು

ಈ ವಾರದ ಸರಿಗಮಪ ಕಾರ್ಯಕ್ರಮದಲ್ಲಿ ಶ್ರೀಹರ್ಷ ಅವರ ಹಾಡುಗಾರಿಕೆ ಬಹಳ ಸೊಗಸಾಗಿತ್ತು. ಆತ ತಾನು ಹಾಡುಗಾರ ಮಾತ್ರ ಅಲ್ಲ. ಒಳ್ಳೆಯ ನಟನಾಗುವ ಸಾಮರ್ಥ್ಯ ಹೊಂದಿರುವ ಸ್ಪರ್ಧಿ ಎಂಬುದನ್ನು 'ಶ್ರೀರಾಮಚಂದ್ರ' ಚಿತ್ರದ ಹಾಡನ್ನು ಹಾಡುವ ಮೂಲಕ ಸಾಬೀತುಪಡಿಸಿದ್ದಾರೆ. ನಟ ರವಿಚಂದ್ರನ್ ಅಭಿನಯಿಸಿದ ಚಿತ್ರದ ಹಾಡನ್ನು ಅವರ ಮುಂದೆ ಹಾಡಿ ಭೇಷ್ ಎನಿಸಿಕೊಂಡರು. 'ಪ್ರೇಮಲೋಕ' ಚಿತ್ರದ ಹಾಡಿಗೆ ಸ್ಪರ್ಧಿಗಳೆಲ್ಲಾ ಸೇರಿ ಹಾಡಿ ಅಭಿನಯಿಸಿದ್ದು ರಂಜನೆ ನೀಡಿತು.

—ಕೆ.ಎಸ್. ಸವಿತ, ಬೆಂಗಳೂರು

ವಾರದ ಪತ್ರ

## ಸಂಗೀತದ ಮಾಂತ್ರಿಕ ಲೋಕ

ಆರಂಭದಲ್ಲಿ ಅಪಸ್ವರಕ್ಕೀಡಾಗಿದ್ದ ಕಲರ್ಸ್ ಕನ್ನಡದ 'ಎದೆ ತುಂಬಿ ಹಾಡುವೆನು' ತನ್ನ ಅಂತಿಮ ಘಟ್ಟದಲ್ಲಿ ಮಾಂತ್ರಿಕ ಸ್ವರ ಲೋಕವೊಂದನ್ನು ಸೃಷ್ಟಿಸಿ ವೀಕ್ಷಕರನ್ನು ಮಂತ್ರಮುಗ್ಧಗೊಳಿಸಿದೆ. ಪ್ರತಿ ಹಾಡುಗಾರರಿಗೂ ಪ್ರಸಿದ್ಧ ಪಕ್ಕವಾದ್ಯ ಕಲಾವಿದರ ಜೊತೆ ಕಲೆ ಪ್ರದರ್ಶನ ಮಾಡಬೇಕೆಂಬ ಕನಸು ಇರುತ್ತದೆ. ಅಂತಹ ಕನಸು ಪವಾಡ ಸದೃಶ್ಯ ಎನ್ನುವಂತೆ ಮೊನ್ನೆ ಜರುಗಿಯೇ ಬಿಟ್ಟಿತು.

ಅಂತಿಮ ಹಂತಕ್ಕೆ ಆಯ್ಕೆಯಾದ ಚಿನ್ಮಯ್ ಅವರಿಗೆ ಹೆಸರಾಂತ ಕೊಳಲು ವಾದಕ ಪ್ರವೀಣ್ ಗೋಡ್ಖಿಂಡಿ, ಸಂದೇಶ್ ಅವರಿಗೆ ಖ್ಯಾತ ವೀಣಾ ವಾದಕಿ ವೀಣಾ ವಾರುಣಿ ಹಾಗೂ ರಶ್ಮಿ ಅವರಿಗೆ ಪ್ರಸಿದ್ಧ ಶಹನಾಯ್ ವಾದಕ ರುದ್ರೇಶ್ ಶಹನಾಯ್ ಪಕ್ಕವಾದ್ಯ ನುಡಿಸಿ ಭಾವುಕ ಸನ್ನಿವೇಶ ಸೃಷ್ಟಿಸಿದರು. ಮೂಲಕ್ಕೆ ಎಲ್ಲಿಯೂ ಅಪಚಾರವಾಗದಂತೆ ಕೊಳಲು, ವೀಣೆ ಹಾಗೂ ಸನಾದಿಯನ್ನು ನುಡಿಸುವ ಮೂಲಕ ಹೊಸ ಪ್ರತಿಭೆಗಳ ಬೆನ್ನು ತಟ್ಟಿದ ಈ ಮೂವರು ಪಕ್ಕವಾದ್ಯಗಾರರು ತಮ್ಮ ವಿನಯವಂತಿಕೆಯಿಂದಲೂ ಗಮನ ಸೆಳೆದರು.

'ಸಾಧು ಕೋಕಿಲಾ ತಮ್ಮ ಗುರು' ಎಂದ ಗೋಡ್ಖಿಂಡಿಯವರು, ಸಂದೇಶ ಅವರಿಗೆ ಧನಸಹಾಯ ಮಾಡಿದ ವೀಣಾ ವಾರುಣಿಯವರು ಮತ್ತು ಸೇನೆಯ ವಾದ್ಯವೃಂದದಲ್ಲಿ ಕೆಲಸ ಮಾಡಿರುವ ರುದ್ರೇಶ್ ಅವರು 'ವಿದ್ಯಾ ದದಾತಿ ವಿನಯಂ' ಎಂಬ ಹೇಳಿಕೆಗೆ ಉದಾಹರಣೆಯಂತೆ ನಡೆದುಕೊಂಡರು. 'ಇದೇ ರಾಗದಲ್ಲಿ ಇದೇ ತಾಳದಲ್ಲಿ ರಾಧೆಗಾಗಿ ಹಾಡಿದ ನೀಲ ಮೇಘ ಶ್ಯಾಮ...', 'ಶಾರದೆ ದಯೆ ತೋರಿದೆ...' ಮತ್ತು 'ಕರೆದರೂ ಕೇಳದೇ...' ಹಾಡುಗಳು ಅತ್ಯಂತ ಸುಶ್ರಾವ್ಯವಾಗಿ ಮೂಡಿಬಂದವು.

—ವಾ. ಮುರಳೀಧರ, ತೀರ್ಥಹಳ್ಳಿ.

## ಕ್ರೀಡೆಗೆ ಮಾನ್ಯತೆ ಇರಲಿ

ಚಂದನ ವಾಹಿನಿಯ 'ಥಟ್ ಅಂತ ಹೇಳಿ' ಕೊರೊನಾ ಕಾರಣಕ್ಕೆ ಸ್ಥಗಿತಗೊಂಡಿತ್ತು. ಕೆಲ ಕಾಲ ಮರುಪ್ರಸಾರದ ಕಾರ್ಯಕ್ರಮಗಳಿಗೆ ಮೊರೆ ಹೋಗುವಂತಾಯಿತು. ನಂತರ ಕೊಂಚ ಕಾಲ ಆನ್‌ಲೈನ್ ಕಾರ್ಯಕ್ರಮಗಳು ಬಿತ್ತರವಾದವು.

ಮೊದಲು ಪ್ರತಿ ಶನಿವಾರ 'ಕ್ರೀಡಾ ವಿಶೇಷ', ಪ್ರತಿ ಭಾನುವಾರ 'ಚಲನಚಿತ್ರ ವಿಶೇಷ' ರೂಪದಲ್ಲಿ ಪ್ರಸಾರವಾಗುತ್ತಿತ್ತು. ಪುನಃ ಕೆಲ ತಿಂಗಳುಗಳ ಹಿಂದೆ ಎಂದಿನಂತೆ 'ಥಟ್ ಅಂತ ಹೇಳಿ' ಪ್ರಸಾರ ಮಾಡಲಾಗುತ್ತಿದೆ. ಆದರೆ ಅದನ್ನು ಯಥಾವತ್ತು ನಡೆಸಿಕೊಂಡು ಬರಲಾಗುತ್ತಿದೆ. ಕ್ರೀಡಾ ಮತ್ತು ಸಿನಿಮಾ ವಿಶೇಷಗಳಿಗೆ ಅವಕಾಶ ಇಲ್ಲದಂತೆ ಆಗಿದೆ. ಪುನಃ ಆರಂಭಿಸಿ ಕನ್ನಡ ಸಿನಿಮಾಕ್ಕೆ ಸಂಬಂಧಿಸಿದಂತೆ ಅನೇಕ ಮಾಹಿತಿಗಳು ಹಾಗೂ ಕ್ರೀಡೆಗೆ ಸಂಬಂಧಿಸಿದ ದೇಶ ವಿದೇಶಗಳ ಕ್ರೀಡೆಗಳ ಅಭೂತಪೂರ್ವ ಮಾಹಿತಿಗಳು ದೊರಕುವಂತೆ ಆಗಲಿ.

—ಹೆಚ್.ವಿ. ಶ್ರೀಧರ್, ಬೆಂಗಳೂರು

ಹೀಗಾಗ ಬಾರದಿತ್ತು: 'ಥಟ್ ಅಂತಾ ಹೇಳಿ'ಯಲ್ಲಿ 'ಮುಂಬೈ ಕರ್ನಾಟಕ ಎಂಬ ಹೆಸರಿಗೆ ಏನೆಂದು ಮರು ನಾಮಕರಣ ಮಾಡಿದರು' ಎಂಬ ಪ್ರಶ್ನೆಗೆ ಸ್ಪರ್ಧಿ ಒಬ್ಬರು 'ಕಲ್ಯಾಣ ಕರ್ನಾಟಕ' ಎಂಬ ಉತ್ತರವನ್ನು ಬಜರ್ ಒತ್ತುವ ಮೊದಲೇ ಉತ್ತರವನ್ನು ಕೊಟ್ಟರು. ನಿರೂಪಕರು ಸ್ವಲ್ಪವೂ ಪರೀಕ್ಷೆಯನ್ನು ಮಾಡದೆ, ಉತ್ತರ ಸರಿ ಎಂದು ಬಹುಮಾನ ಕೊಟ್ಟಿದ್ದು ವಿಷಾದದ ಸಂಗತಿ.

—ಮಧುಮತಿ ಅಭಿಷೇಕ್, ಚಿತ್ರದುರ್ಗ

## ಮಾಹಿತಿಪೂರ್ಣ ಕಥೆ

ಕಲರ್ಸ್ ಕನ್ನಡದ 'ಗಿಣಿರಾಮ'ದಲ್ಲಿ ಇತ್ತೀಚಿನ ಪ್ರಸಂಗ (Episode)ಗಳು ತುಂಬಾ ಚೆನ್ನಾಗಿ ಮೂಡಿ ಬರುತ್ತಿವೆ. ರಾಜಕೀಯ ಪಕ್ಷಗಳ ಮುಖಂಡರು ಅಮಾಯಕರನ್ನು ದುರುಪಯೋಗ ಮಾಡಿಕೊಳ್ಳುವ ಬಗೆಯನ್ನು 'ಮಹತಿ' ಪಾತ್ರದ ಮೂಲಕ ಚೆನ್ನಾಗಿ ತೋರಿಸಿದ್ದಾರೆ. ಜನತೆಗೆ ಈ ರೀತಿಯ ಒಳ್ಳೆಯ ಸಂದೇಶ ಸಾರುವ ಪ್ರಸಂಗಗಳು ಇದ್ದರೆ ಒಳ್ಳೆಯದು.

—ಕಮಲಾದೇವಿ ರಾಜಶೇಖರ ಹಳೂರ್, ಬೆಂಗಳೂರು

## ಮೂಗಿಗಿಂತ ಮೂಗುತಿ ಭಾರ

ಕನ್ನಡ ಧಾರಾವಾಹಿಗಳಲ್ಲಿ ಕನ್ನಡತನದ ಸೊಗಡು ಮಾಯವಾಗಿ ಪರಭಾಷಾ ಸಂಸ್ಕೃತಿ ಎದ್ದು ತೋರುತ್ತಿದೆ. ಪಾತ್ರಧಾರಿಗಳನ್ನು ಅನಗತ್ಯ ಕಪ್ಪಾಗಿಸುವುದು, ಖಳ ಪಾತ್ರಧಾರಿಗಳ ಕೆದರಿದ ಕೂದಲು, ಉಗ್ರ ಮುಖ, ಥಾಳಾದ ಗಡ್ಡ, ದಪ್ಪ ಮೀಸೆಯೊಂದಿಗೆ ಊರು ಒಂದಾಗುವಂತೆ ಕಿರುಚಿದರೆ, ಮಧ್ಯವಯಸ್ಕ ಮಹಿಳೆಯರು ಮೂಗಿನ ಎರಡೂ ಬದಿಗೆ ದೊಡ್ಡ ದೊಡ್ಡ ಮೂಗುತಿ ಧರಿಸಿ ಕೆಜಿಎಫ್ ವಿಲನ್‌ಗಳಂತೆ ಹಾರಾಡುವುದು, ಮದುವೆಗಳನ್ನು ಉತ್ತರಭಾರತದ ಸಂಪ್ರದಾಯದಂತೆ ನಡೆಸುವುದು ಸರ್ವೇಸಾಮಾನ್ಯವಾಗುತ್ತಿದೆ! ನಮ್ಮ ಸಿರಿಗನ್ನಡದ ಸಂಸ್ಕೃತಿಗೆ ಕೊಕ್ ಕೊಟ್ಟು ಮತ್ತೊಂದನ್ನು ಅನುಕರಿಸುವುದು ಬೇಕೆ?

—ಕೆ. ಶ್ರೀನಿವಾಸ ರಾವ್, ಹರಪನಹಳ್ಳಿ